


**ಪ್ರವಾಸಿಗರಿಗೆ ಗೌರವ**

ಫೆ.17ರ ಸಂಚಿಕೆಯ ಮುಖಪುಟದ ಲೇಖನ ಪ್ರದೀಪ್‌ಕುಮಾರರ 'ಬಾ ಬಾಲಿಗೆ ಮಧು ಚಂದ್ರಕೆ' ಯಲ್ಲಿ ಇಂಡೋನೇಷ್ಯಾದ ಬಾಲಿ ದ್ವೀಪದ ಸೌಂದರ್ಯ, ಪ್ರವಾಸಿಗರಿಗೆ ಅವರು ನೀಡುವ ಗೌರವದ ಬಗ್ಗೆ ಓದಿ ಸಂತೋಷವಾಯಿತು.

-ಎನ್. ಪ್ರಕಾಶ- ದೇವನಹಳ್ಳಿ, ಜಿ.ಕೆ.ಶ್ರೀಮತಿ, ಎಚ್.ಎಸ್. ಶ್ರೀಮತಿ, ಕೋಟೇಶ್ವರ ಸೂರ್ಯ ನಾರಾಯಣ ರಾವ್- ಬೆಂಗಳೂರು, ಎಚ್.ಆನಂದ ಕುಮಾರ್- ಚಿತ್ರದುರ್ಗ, ಕೆ.ಎಸ್.ಶಶಿಕಲಾ- ಮೈಸೂರು, ಪಿ.ಗೋವಿಂದರಾಜ್- ತುಮಕೂರು

**ಅರ್ಥಪೂರ್ಣ ವಿಚಾರ**

ವಿಚಾರ ಲಹರಿಯಲ್ಲಿ ಶಿಕಾಕು ಲೇಖನ 'ಬದುಕಲು ಬಿಡಿ, ನೀವೂ ಬದುಕಿ' ಅರ್ಥಪೂರ್ಣವಾಗಿದೆ.

-ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ತರಂಗಿಣಿ, ತುಮಕೂರು/ ಮಹಾವೀರ ಕಾಸಾರ, ಶಿವಮೊಗ್ಗ/ ಮೊಳಕಾಲ್ಮುರು ಸುರೇಶ, ಬಳ್ಳಾರಿ

**ಸೀರೆಯ ಸೊಬಗೇ ಬೇರೆ**

ಎಲ್ಲಾ ವಯಸ್ಸಿನವರಿಗೂ ಸಲ್ಲುವ(!) 'ಚೂಡಿದಾರ್' ಈಗ ಜನಪ್ರಿಯ ದಿರಿಸೇ ಆಗಿರಬಹುದು. ಯುವತಿ ಯರು ಈ ಡ್ರೆಸ್‌ನಲ್ಲಿ ಚೆನ್ನಾಗಿ ಕಾಣಬಹುದೇನೋ? ಆದರೆ ವಯಸ್ಸಾದ ಅಮ್ಮಂದಿರು; ಅಜ್ಜಿಯರು ಧರಿಸಿದರೆ ನೋಡಲು ಕಸಿವಿಸಿ ಆಗೋದಂತೂ ನಿಜ! ಏನೇ ಆದರೂ

'ಭಾರತೀಯ ನೀರೆ;
ಆಕೆ ಉಟ್ಟರೇ ಸೀರೆ;
ಅದರ ಸೊಬಗೇ ಬೇರೇ...'

-ಬಿ.ಎಸ್. ರಮೇಶ್, ಬೆಂಗಳೂರು

**ವಯಸ್ಸಾದವರಿಗೆ ಚೂಡಿದಾರ್ ಬೇಡ**

ವಯಸ್ಸಾದ ಮಹಿಳೆಯರು ಚೂಡಿದಾರ್ ಉಟ್ಟರೆ ದಪ್ಪಹೊಟ್ಟೆಯಂತಹ ಓರೆಕೋರೆಗಳೆಲ್ಲ ಎದ್ದುಕಾಣುವುದರಿಂದ ಅಷ್ಟು ಸರಿ ಕಾಣುವುದಿಲ್ಲ. ಮೇಲೆ ದುಪಟ್ಟಾ ಇರುತ್ತದೆ, ನಿಜ. ಆದರೆ ಅದು ತನ್ನ ಉದ್ದೇಶಿತ ಕಾರ್ಯದಲ್ಲಿ ಸೋತಿರುವುದೇ ಹೆಚ್ಚು.

-ಸುಮನ, ಬೆಂಗಳೂರು

**ಚೂಡಿದಾರ್ ಅನುಕೂಲ**

ಚೂಡಿದಾರ್ ಎಲ್ಲ ಸಂದರ್ಭಕ್ಕೂ ಎಲ್ಲರೂ ಒಪ್ಪುವ ಆರಾಮದಾಯಕ ಉಡುಗೆ.

-ವಿಭಾ ಮುರಳೀಧರ್, ತುಮಕೂರು

**ಮರುಪ್ರಕಟ**

'ನಕ್ಕು ಬಿಡಿ' ಅಂಕಣ ಕೆ.ಪಿ. ಸತ್ಯನಾರಾಯಣರ ಬರಹ ಈ ಹಿಂದೆ 'ದಿ. ಹಿಂದೂ' ಇಂಗ್ಲಿಷ್ ದಿನಪತ್ರಿಕೆಯ ಮಂಗಳವಾರದ ಪುರವಣಿ 'ಯಂಗ್ ವರ್ಲ್ಡ್'ನಲ್ಲಿ ಪ್ರಕಟವಾಗಿದೆ.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

**ಮಾಹಿತಿಯ ಅರಿವು**

'ಮಾಹಿತಿ ನಿಮ್ಮ ಹಕ್ಕು' ಲೇಖನ ಉಪಯುಕ್ತವಾಗಿದೆ. ಓದುಗರಲ್ಲಿ ಅರಿವು ಮೂಡಿಸುತ್ತದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

**ನಟ- ನಟಿಯರ ಅಭಿಪ್ರಾಯ ಸ್ವಾಗತ!**

'ವ್ಯಾಲೆಂಟೈನ್ ಡೇ' ಮಾನಸ ಕಿಲಾರರ ಲೇಖನದಲ್ಲಿ ಪ್ರೇಮಿಗಳ ದಿನದ ಅಭಿಪ್ರಾಯವನ್ನು ಯುವಕರು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ಯುವ ಪೀಳಿಗೆಗೆ ಇಂದಿನ ನಟ-ನಟಿಯರು ಆರಾಧ್ಯ ದೈವವಾಗಿರುವಾಗ 'ಸುಧಾ'ಳ ಅಭಿಪ್ರಾಯ ಸಂಗ್ರಹಣೆ ಹೊಸ ಪ್ರಯತ್ನ!

-ನೆ.ಲ.ರಾಂ., ಬೆಂಗಳೂರು

**ಮೀನು ಮಾರುವ ಹುಡುಗ- ಆಪ್ತ ಬರಹ**

'ಚಿತ್ರ ಸಂತೆಯಲ್ಲಿ ಮೀನು ಮಾರುವ ಹುಡುಗ'ನ ಕುರಿತ ದಿಲ್ ಬರಹ ಆಪ್ತವಾಗಿತ್ತು. ಈ ಹುಡುಗ ಮಂಜುನಾಥನ ಭವಿಷ್ಯ ಉಜ್ವಲವಾಗಲಿ.

-ಎಂ.ಎಸ್.ಲೀಲಾವತಿ, ಬೆಂಗಳೂರು/ ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ

**ಹಿತ್ತಲ ಗಿಡ ಮದ್ದಲ್ಲ!**

'ಇಟ್ಟಿಗೆಯ ಕಾರು' ಅಷ್ಟೇನು ವಿಶೇಷ ಎನ್ನಿಸಲಿಲ್ಲ. ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಅನೇಕ ಮಹಡಿ ಮನೆಗಳ ಮೇಲ್ಭಾಗದಲ್ಲಿ ಕಾರಿನಂತೆ, ಹಡಗಿನಂತೆ, ಕಮಲದಂತೆ ಇಟ್ಟಿಗೆಯನ್ನು ಬಳಸಿದ ನೀರಿನ ತೊಟ್ಟಿಗಳನ್ನು ಕಟ್ಟಿದ್ದಾರೆ. ಆದರೆ ಹೊರಗಡೆ ಸಿಮೆಂಟ್ ಬಳಸಿ ಪ್ಲಾಸ್ಟರಿಂಗ್ ಮಾಡುವ ಕಾರಣ ಇಟ್ಟಿಗೆಗಳು ಹೊರಗಡೆ ಕಾಣವು.

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

**ಅಪರೂಪದ ಕಥೆ**

ರಾಜಶೇಖರ ಗೌಡ ಕೊಟ್ಟೂರು ಅವರ 'ಸೋಮಾರಿ ಈಶ' ಕಥೆಯಲ್ಲಿ ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ಬಳಸಿ ಅರ್ಥಪೂರ್ಣವಾಗಿ ಹೆಣೆಯಲಾಗಿದೆ. ಇಂತಹ ಘಟನೆಗಳನ್ನಾಧರಿಸಿ ಬಂದಿರುವ ಇದು ಇತ್ತೀಚಿನ ದಿನಗಳಲ್ಲಿ ತೀರಾ ಅಪರೂಪವಾದ ಅರ್ಥಪೂರ್ಣ ಕಥೆ ಎಂದು ಹೇಳಬಹುದು.

-ನಾಗರಾಜ್ ಬಣಕಾರ್, ಕೊಟ್ಟೂರು

**ಸಕಾಲಿಕ ಕಥೆ**

ಎಸ್.ಪಿ. ವಿಜಯಲಕ್ಷ್ಮಿಯವರ 'ಹದಿಹರೆಯ ಹದವಿರಲಿ' ಪ್ರೇಮಿಗಳ ಮುನ್ನಾ ದಿನಗಳಲ್ಲಿ ಅದಕ್ಕೊಂದುವ ಕತೆಯೇ ಆಗಿತ್ತು.

-'ಕೊಹಿಮ', ಬಸರಕೋಡು, ರಾಜಶೇಖರ ಗೌಡ, ಕೊಟ್ಟೂರು

**ಮೈಜುಂ ಎನಿಸುವ ಕಥೆ**

ಫೆ.10ರ 'ಸುಧಾ'ದಲ್ಲಿ ಪ್ರಕಟವಾದ 'ನಾಚಿಕೆ' ಕಥೆ (ಅಸ್ಸಾಮಿ ಪೋಳ್ ಡೇಕಾರ ಕಥೆಯ ಕನ್ನಡಾನು ವಾದ: ಡಾ.ಬಸವರಾಜ ಸಾದರ) ಹಸಿವು, ಬಡತನವೆಂಬ ಮನುಷ್ಯನ ಮೂಲಭೂತ ನೋವನ್ನು ಹೃದಯವಿದ್ರಾವಕವಾಗಿ ಚಿತ್ರಿಸಿದೆ. ಕಥೆ ಓದಿ ಮೈಜುಂ ಎಂದಿತು. ಬಡತನ ತಂದೊಡ್ಡುವ ಅಸಹಾಯಕತೆಯನ್ನು ಅತ್ಯಂತ ಸಂಯಮದಿಂದ ಕಲಾತ್ಮಕವಾಗಿ ಚಿತ್ರಿಸಲಾಗಿದೆ.

ಬಿ.ಎಸ್.ಮುಳ್ಳೂರ- ಹಲಗತ್ತಿ, ಕೊಹಿಮ, ಬಸರಕೋಡು/

**ಭೀಮಸೇನರಿಗೆ ಗೌರವ**

ಭಾರತರತ್ನ ಪಂಡಿತ್ ಭೀಮಸೇನ ಜೋಶಿಯವರ ಬಗ್ಗೆ 'ಸುಧಾ'ದಲ್ಲಿ ಮುಖಪುಟ ಲೇಖನ ನಿರೀಕ್ಷಿಸಿದ್ದೆ. ಮುಖಪುಟ ಇಲ್ಲದಿದ್ದರೂ ಎರಡು ಪ್ರಮುಖ ಲೇಖನ- ಚಿತ್ರಗಳನ್ನು ನೋಡಿ ಸಂತಸವಾಯಿತು.

-ಎಸ್.ಲಕ್ಷ್ಮಿನರಸಿಂಹ- ಚಾಮರಾಜನಗರ



